ಅಧ್ಯಕ್ಷರು:—ಇದು ತರ್ಕದ ವೇಳೆಯಲ್ಲ, ಪ್ರಶ್ನೋತ್ತರದ ವೇಳೆ ಎನ್ನುವುದನ್ನು ಮಾನ್ಯ ಸದಸ್ಯರೂ ಮತ್ತು ಮಾನ್ಯ ಮಂತ್ರಿಗಳೂ ತಿಳಿದುಕೊಳ್ಳಬೇಕು.

ಶ್ರೀ ಎಚ್.ಎನ್. ನಂಜೇಗೌಡ:— ಮಾನ್ಯ ಅಧ್ಯಕ್ಷರೇ, ಪ್ರಾಸಂಗಿಕವಾಗಿ ಹೇಮಾವತಿ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಯಾವ ಏಜನ್ಸಿಗೆ ಕೆಲಸವನ್ನು ಕೊಟ್ಟಿದ್ದರೋ, ಅವರಿಗೆ ಗೊತ್ತು ಮಾಡಿದ್ದ ಕೆಲಸವನ್ನು ಮುಗಿಸಿದ್ದು ಉಳಿದ ಕೆಲಸವನ್ನು ಕೊಡಬೇಕಾಗಿತ್ತು. ಈ ಮಧ್ಯೆ ಹಿಂದಿನ ಸರ್ಕಾರದವರು ಮೇಸನ್ರಿ ಕೆಲಸ ಜೊತೆಯಲ್ಲಿ ಫೇಸಿಂಗ್ ಸ್ಟೋನ್ಸ ಕೆಲಸ ಮಾಡುವುದನ್ನು ಬಿಟ್ಟು ಬಿಟ್ಟಿದ್ದರು. ಎರಡೂ ಜೊತೆ ಜೊತೆಯಲ್ಲಿ ಹೋಗಬೇಕಾಗುತ್ತದೆ. ಬಹಳ ಇಕ್ಕಟ್ಟಿನ ಪರಿಸ್ಥಿತಿ ಇದ್ದು, ಯಾರೇ ಮುಂದೆ ಬಂದರೂ ಸಿಕ್ಕಿಹಾಕಿಕೊಳ್ಳುವ ರೀತಿ ಕಂಟ್ರಾಕ್ಟರುಗಳು ಸರ್ಕಾರದ ಮೇಲೆ ಹಿಡಿತವನ್ನು ಇಟ್ಟುಕೊಳ್ಳುವ ರೀತಿಯಲ್ಲಿ ಟೆಂಡರುಗಳನ್ನು ತೀರ್ಮಾನ ಮಾಡಿದ ಪರಿಸ್ಥಿತಿ ಇತ್ತು. ಕಂಟ್ರೋಲ್ ಜೋರ್ಡಿನ ವೀಟಿಂಗಂ ಗಳನ್ನು ಆತುರಾತುರವಾಗಿ ಮಾಡತಕ್ಕ ದಿಸೆಯಲ್ಲಿ ಕ್ರಮ ಕೈಕೊಂಡಿದ್ದೇವೆ. ಎಲ್ಲ ತಿರ್ಮಾನವಾದ ಮೇಲೆ, ಹೊಸದಾಗಿ ಟೆಂಡರುಗಳನ್ನು ಕರೆದು, ವರ್ಕ್ ಎನ್ಟ್ರಸ್ಟ್ ಪೂಡಿ, ಕೆಲಸ ಪ್ರಾರಂಭ ಮಾಡಬೇಕಾಗುತ್ತದೆ.

DEFECT IN DRINKING WATER

888 SRI K.H. KURADAGI (Mundargi):—Will the Minister for Health be pleased to state.—

(*a*) Whether it has come to the notice of the Government that due to defect in drinking water the people of Mundargi taluk are suffering from dental defects, rheumatism and various other diseases;

(*b*) if so, whether the Government have investigated as these diseases are due to defect in underground water?

SRI H SIDDAVEERAPPA—Minister for Health:

(*a*) Yes.

(*b*) Yes.

ಶ್ರೀ ಕೆ ಎಚ್. ಕುರಡಗಿ;—ಈ ಬೇನೆ ಎಷ್ಟು ಜನರಿಗೆ ತಗುಲಿದೆ ಎಂದು ಹೇಳುತ್ತಾರೆಯೇ?

†ಶ್ರೀ ಎಚ್. ಸಿದ್ದವೀರಪ್ಪ:—ಜೂನ್ ತಿಂಗಳಿನಲ್ಲಿ ೩೦ ಜನರಿಗೆ, ಜುಲೈ ತಿಂಗಳಿನಲ್ಲಿ ೪೦ ಜನರಿಗೆ ಹಲ್ಲು ನೋವು ಬಂದಿದೆ. ಕೈಕಾಲು ಸಂದು ನೋವು ಜೂನ್ ತಿಂಗಳಿನಲ್ಲಿ ೫೦ ಜನರಿಗೆ, ಜುಲೈ ತಿಂಗಳಿನಲ್ಲಿ ೨೦ ಜನರಿಗೆ ಬಂದಿದೆ. ದೊಂಬಾಳ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೇ ತಿಂಗಳಲ್ಲಿ ೩೨ ಜನರಿಗೆ, ಜೂನ್ ತಿಂಗಳಿನಲ್ಲಿ ೨೦ ಜನರಿಗೆ ಮತ್ತು ಜುಲೈ ತಿಂಗಳಿನಲ್ಲಿ ೨೧ ಜನರಿಗೆ ಹಲ್ಲು ನೋವು ಬಂದಿದೆ. ಕೈ ಕಾಲು ಸಂದಿ ನೋವು ಮೇ ತಿಂಗಳಿನಲ್ಲಿ ೯೧ ಜನರಿಗೆ, ಜೂನ್ ತಿಂಗಳಿನಲ್ಲಿ ೭೮ ಜನರಿಗೆ ಮತ್ತು ಜುಲೈ ತಿಂಗಳಿನಲ್ಲಿ ೨೧ ಜನರಿಗೆ ಬಂದಿದೆ.

ಶ್ರೀ ಕೆ.ಎಚ್. ಕುರಡಗಿ:— ಈ ರೋಗದ ನಿವಾರಣೆ ಸಲುವಾಗಿ ಸರ್ಕಾರದವರು ಮುಂದೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಎಚ್. ಸಿದ್ದವೀರಪ್ಪ:— ಫ್ಲೋರೈಡ್ ಹೀಗಾಯಿತೆ ಎನ್ನುವುದನ್ನು ತಿಳಿಯಲು ಧಾರವಾಡದ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ವಿಭಾಗಕ್ಕೆ ತಪಾಸಣೆಗೆ ಕಳುಹಿಸಿ ಕೊಟ್ಟಿದ್ದೇವೆ. ಮತ್ತು ಈ ಬೇನೆ ಬರುವವರು ತಕ್ಷಣ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ತೆಗೆದುಕೊಳ್ಳಿರಿ ಎಂದು ಹೇಳಿದ್ದೇವೆ. ಈ ನೀರು ಕುಡಿಯುವುದರಿಂದ ಹಲ್ಲು ನೋವು ಇವೆಲ್ಲ ಏಕೆ ಬರುತ್ತವೆನ್ನುವುದನ್ನು ವೈಜ್ಞಾನಿಕವಾಗಿ ತಪಾಸಣೆ ಮಾಡುವುದಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಎಂ.ಎಚ್. ಜಯ ಪ್ರಕಾಶನಾರಾಯಣ್.–ಈ ಬೇನೆ ಭೂಗರ್ಭದ ನೀರಿನಿಂದ ಬರುತ್ತದೆ ಎನ್ನುವುದನ್ನು ಭೂಗರ್ಭ ತಜ್ಞರು ಬರೆದಿದ್ದಾರೆಯೇ ಅಥವಾ ವೈಜ್ಞಾನಿಕವಾಗಿ ಅನಲೈಸ್ ಮಾಡಿದ್ದೀರಾ? ಬೇನೆ ಅದರಿಂದಲೇ ಬಂತು ಎನ್ನುವ ರೀತಿಯಲ್ಲಿ ಉತ್ತರವಿದೆ. ಹಾಗಾದರೆ ನೀರಿನಲ್ಲಿರತಕ್ಕ ಆಮ್ಲ,ಜನಕ ಮತ್ತು ಜಲಜನಕದ ಜೊತೆಗೆ ಯಾವ ರಾಸಾಯನಿಕ ಶಕ್ತಿಯಿಂದ ಈ ಬೇನೆ ಬರುವುದಕ್ಕೆ ಅವಕಾಶವಾಯಿತು ಎಂದು ತಜ್ಞರ ವರದಿಯನ್ನು ಸೂಕ್ಷ್ಮವಾಗಿ ಹೇಳುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ವೆರಿಫಿಕೇಷನ್ನಿಗೆ ಕಳುಹಿಸಿದ್ದೇವೆ.

ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ್.—ಹೌದು ಎಂದು ಹೇಳಿದ ಮೇಲೆ, ನಿಮ್ಮ ಹತ್ತಿರ ರಿಪೋರ್ಟ್ ಇರಲೇ ಬೇಕಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ .—ನನಗೆ ಸ್ವಲ್ಪ ಕಲ್ಲು ನೋವು ಬರುವ ಹಾಗೆ ಮಾಡಬೇಡಿ. ನಮ್ಮ ಡಾಕ್ಟರುಗಳ ಹತ್ತಿರ ಚಿಕಿತ್ಸೆಗೆ ಹೋದಾಗ ಇದು ವಾಟರ್ ಬೋರನ್ ಡಿಸೀಸ್ ಎಂದು ಹೇಳಿದರು. ಆದ್ದರಿಂದ ಇದು ವಾಟರ್‌ಬೋರನ್ ಡಿಸೀಸ್ ಹೌದೇ ಅಲ್ಲವೇ ಎಂದು ಪರೀಕ್ಷೆ ಮಾಡಲು ತಜ್ಞರಿಗೆ ಕಳಿಸಿಕೊಟ್ಟಿದ್ದೇವೆ. ನೋವು ಬರತಕ್ಕ ಕ್ರಿಮಿಕೀಟಗಳು ಇವೆಯೇ ಎಂದು ವಿಚಾರ ಮಾಡಲಿಕ್ಕೆ ಕಳುಹಿಸಿದ್ದೇವೆ. ತಜ್ಞರ ರಿಪೋರ್ಟು ಏನು ಇಲ್ಲ. ಆಸ್ಪತ್ರೆಗೆ ಹೋದಾಗ ಇನ್‌ವೆಸ್ಟಿಗೇಷನ್ ಮಾಡುತ್ತಾರೆ. ಯಾರಿಗಾದರೂ ಜ್ವರ ಬಂದರೆ, ಅಥವಾ ಕಾಯಿಲೆ ಬಂದರೆ, ನರ ಹಿಡಿದು ಇಂಥಾದ್ದು ಆಗಿರಬಹುದು ಎಂದು ಹೇಳುತ್ತಾರೆ. ಹೌದೋ ಅಲ್ಲವೋ ಎನ್ನುವುದಕ್ಕೆ ಫರ್ದರ್ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಕಳುಹಿಸಿಕೊಡುತ್ತಾರೆ.

TANIGEBYLE SINTERI NG PLANT OF M.I.S.L.

985. SRI S. M. SHEERANALY CHANDRASEKHAR .— Hosanagar) .— Will the Minister for Industries be pleased to state :—

whether it is a fact that the Tanigebyle Sintering Plant belonging to the Mysore Iron and Steel Ltd., Bhadravathi is to be closed even though it is fetching plenty of Iron Ore ?

SRI S. M. KRISHNA .—(Minister for Industries) .—No.

ಶ್ರೀ ಎಸ್. ಎಂ. ಶ್ರೀರನಾಳಿ ಚಂದ್ರಶೇಖರ್ .—ಭದ್ರಾವತಿಯಲ್ಲಿರುವ ಮೈಸೂರು ಕಬ್ಬಿಣ ಉಕ್ಕಿನ ಕಾರ್ಖಾನೆ (ಲಿಪ)ಯವರಿಗೆ ಸೇರಿದ ತಣಿಗೇ ಬೈಲ್ ಸಿಂಟರಿಂಗ್ ಯಂತ್ರದಿಂದ ಸಾಕಷ್ಟು ಕಬ್ಬಿಣದ ಅದಿರು ಉತ್ಪಾದನೆ ಯಾಗುತ್ತಿದ್ದಾಗ್ಯೂ ಅದನ್ನು ನಿಲ್ಲಿಸಬೇಕಾಗಿರುವುದು ನಿಜವೇ ಎನ್ನುವುದಕ್ಕೆ ನಿಜವಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಈ ಅಭಿಪ್ರಾಯ ಬೆಂಗಳೂರು ಮಟ್ಟದಲ್ಲಿ ಬಂದಿರುವುದೋ ಅಥವಾ ವರದಿ ಬಂದಿರುವುದೋ ಗೊತ್ತಿಲ್ಲ. ಅಲ್ಲಿ ಕೆಲಸ ಮಾಡತಕ್ಕ ಸಾವಿರಾರು ಜನ ಕೆಲಸಗಾರರಿಗೆ ಅಧಿಕಾರಿಗಳು ಈ ಇಂಡಸ್ಟ್ರಿಯನ್ನು ನಿಲ್ಲಿಸುತ್ತೇವೆ ಎಂದು ಪದೇ ಪದೇ ಹೇಳುತಿದ್ದಾರೆ ಒಂದು ಪ್ಯಾನಿಕ್ ಕ್ರಿಯೇಟ್ ಆಗಿದೆ. ತಾವು ಈ ಸಿಂಟರಿಂಗ್ ಪ್ಲಾಂಟನ್ನು ನಿಲ್ಲಿಸುವುದಿಲ್ಲ ಎಂದು ಜಿ.ಓ. ಹೊರಡಿಸುತ್ತೀರಾ?

† ಶ್ರೀ ಎಸ್. ಎಂ. ಕೃಷ್ಣ .—ತಣಿಗೆ ಬೈಲ್ ಸಿಂಟರಿಂಗ್ ಪ್ಲಾಂಟ್‌ನಲ್ಲಿ ಸಿಂಟರಿಂಗ್ ಮಾಡುತ್ತಾ ಇದ್ದಂಥ ಅದುರಿನ ಕಾಸ್ಟ್ ಬಹಳ ಹೆಚ್ಚಾಗಿ ಪರಿಣಮಿಸಿದ್ದುದರಿಂದ ಆ ಸಿಂಟರಿಂಗ್ ಪ್ಲಾಂಟನ್ನು ಇಟ್ಟುಕೊಳ್ಳಬೇಕೆ, ಬೇಡವೇ, ಎನ್ನುವ ವಿಚಾರನೆನ್ನು ತೀರ್ಮಾನ ಮಾಡುವುದಕ್ಕೆ ಭದ್ರಾವತಿ ಉಕ್ಕಿನಕಾರ್ಖಾನೆಯ ಬೋರ್ಡ್ ಆಫ್ ಡೈರೆಕ್ಟರ್ಸ್ ಅವರು ಒಂದು ಸಬ್ ಕಮಿಟಿ ಮಾಡಿದ್ದಾರೆ. ಈ ಸಬ್ ಕಮಿಟಿಯವರು ಸಿಂಟರಿಂಗ್ ಪ್ಲಾಂಟ್‌ನ ಎಕನಾಮಿ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡಿ, ಆನಂತರ ಅವರು ತಮ್ಮ ವರದಿ ಕೊಟ್ಟ ಮೇಲೆ ಈ ಸಿಂಟರಿಂಗ್ ಪ್ಲಾಂಟಿನ್ನು ಶಾಶ್ವತವಾಗಿ ಮುಚ್ಚಬೇಕೇ ಅಥವಾ ಪುನರ್ ಪ್ರಾರಂಭಿಸಬೇಕೇ ಎನ್ನತಕ್ಕಥಾದ್ದನ್ನು ತೀರ್ಮಾನ ಮಾಡುತ್ತೇವೆ.

ಶ್ರೀ ಎಂ. ಶ್ರೀರನಾಳಿ ಚಂದ್ರಶೇಖರ್ .—ತಾವು ಈ ಸಿಂಟರಿಂಗ್ ಪ್ಲಾಂಟ ಅನ್ನು ಶಾಶ್ವತವಾಗಿ ನಿಲ್ಲಿಸುವುದಿಲ್ಲ ಎಂದು ಈ ಮುಖಾಂತರ ಭರವಸೆ ಕೊಡುತ್ತೀರಾ?